# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2182
ಉತ್ತರಿಸಬೇಕಾದ ದಿನಾಂಕ : 18.03.2022.
ಸದಸ್ಯರ ಹೆಸರು : ಶ್ರೀ ಯು.ಬಿ. ವೆಂಕಟೇಶ್ (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸುವ ಸಚಿವರು : ಮಾನ್ಯ ರೇಷ್ಮೆ,ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕ್ರೀಡೆಗಳನ್ನು ಉತ್ತೇಜಿಸಲು ಹಾಗೂ ಪ್ರೋತ್ಸಾಹಿಸಲು ಸರ್ಕಾರದ ಎಲ್ಲಾ ಇಲಾಖೆಗಳು / ನಿಗಮಗಳು / ಕಂಪನಿಗಳು ತಮ್ಮ ವ್ಯಾಪ್ತಿಯಲ್ಲಿ ನೇಮಕಾತಿಯನ್ನು ಮಾಡಲು ಕ್ರಮ ಕೈಗೊಳ್ಳುವುದೇ; | ಹೌದು. ನೇರ ನೇಮಕಾತಿ ಮೂಲಕ ಮಾಡುವ ನೇಮಕಾತಿಗಳಲ್ಲಿ ಒಲಂಪಿಕ್/ ಪ್ಯಾರಾಲಿಂಪಿಕ್ ಅಥವಾ ಏಷಿಯನ್ ಗೇಮ್ಸ್ / ಕಾಮನ್ ವೆಲ್ತ್ ಗೇಮ್ಸ್ ನಲ್ಲಿ ಪದಕ ವಿಜೇತರಾದವರಿಗೆ ನಿರ್ದಿಷ್ಟಪಡಿಸಲಾದ ಇಲಾಖೆಗಳಲ್ಲಿ ಸಮೂಹ 'ಎ' ಮತ್ತು 'ಬಿ' ಹುದ್ದೆಗಳಿಗೆ ಅವಕಾಶ ಕಲ್ಪಿಸಲು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಕರ್ನಾಟಕ ನಾಗರಿಕ ಸೇವಾ (ಅಂತಾರಾಷ್ಟ್ರೀಯ ಒಲಿಂಪಿಕ್ ಪಂದ್ಯಾವಳಿಗಳು, ಏಷ್ಯಿಯನ್ ಪಂದ್ಯಾವಳಿಗಳು ಮತ್ತು ಕಾಮನ್‌ವೆಲ್ತ್ ಪಂದ್ಯಾವಳಿಗಳಲ್ಲಿ ಪದಕ ವಿಜೇತರಾದವರಿಗೆ ಕೆಲವು ಹುದ್ದೆಗಳಿಗೆ ನೇಮಕಾತಿ) (ವಿಶೇಷ) ನಿಯಮಗಳು, 2021ರ ಕರಡನ್ನು ರಚಿಸಿ, ದಿನಾಂಕ: 30.08.2021ರಲ್ಲಿ ಸಿಆಸು ಇಲಾಖೆಗೆ ಕಳುಹಿಸಲಾಗಿರುತ್ತದೆ.<br><br>ಅಲ್ಲದೇ, ವಿವಿಧ ರಾಷ್ಟ್ರೀಯ / ಅಂತಾರಾಷ್ಟ್ರೀಯ / ವಿಶ್ವವಿದ್ಯಾಲಯ ಹಾಗೂ ರಾಜ್ಯ ಮಟ್ಟದ ಕ್ರೀಡಾಕೂಟಗಳಲ್ಲಿ ಪಾಲ್ಗೊಂಡು ಗಣನೀಯ ಸಾಧನೆ ಮಾಡಿದ ಪ್ರತಿಭಾವಂತ ಕ್ರೀಡಾಪಟುಗಳಿಗೆ ಸಾಮಾನ್ಯ ನೇಮಕಾತಿ ನಿಯಮಾವಳಿಯಲ್ಲಿ ಶೇ.2ರಷ್ಟು ಹುದ್ದೆಗಳನ್ನು ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಮೀಸಲಿಡುವ ಬಗ್ಗೆ, ಸಾಮಾನ್ಯ ನೇಮಕಾತಿ ನಿಯಮಕ್ಕೆ ತಿದ್ದುಪಡಿ ಮಾಡುವ ಬಗ್ಗೆ ಎಲ್ಲಾ ಇಲಾಖೆಗಳ ಅಭಿಪ್ರಾಯಗಳನ್ನು ಕ್ರೂಢೀಕರಿಸಿ ಸಿಆಸು ಇಲಾಖೆಗೆ ಸೂಚಿಸಲು ಮಾನ್ಯ ಮುಖ್ಯಮಂತ್ರಿಯವರಿಗೆ ಕಡತ ಸಂಖ್ಯೆ: ವೈಎಸ್‌ಡಿ-ಇವೈಡಬ್ಲ್ಯೂ/139/2021ರಲ್ಲಿ ಪ್ರಸ್ತಾವನೆಯನ್ನು ದಿನಾಂಕ: 05.02.2022ರಲ್ಲಿ ಸಲ್ಲಿಸಲಾಗಿದೆ.<br><br>ಹಾಗೆಯೇ, ಸಾಧಕ ಕ್ರೀಡಾಪಟುಗಳಿಗೆ ನೇಮಕಾತಿಯಲ್ಲಿ ಶೇ. 50ರಷ್ಟು ಅವಕಾಶ ಕಲ್ಪಿಸುವ |

| | | |
|---|---|---|
| | | ಉದ್ದೇಶದಿಂದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಸಮಗ್ರ ಪರಿಷ್ಕರಣೆಯನ್ನು ವೃಂದ ಪರಿಶೀಲನಾ ಉಪ ಸಮಿತಿಯ ಪರಾಮರ್ಶೆಯೊಂದಿಗೆ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆ, ಸಿಆಸು ಇಲಾಖೆ ಹಾಗೂ ಸಂಸದೀಯ ವ್ಯವಹಾರಗಳ ಇಲಾಖೆಗೆ ದಿನಾಂಕ:10.03.2022 ರಂದು ಕಳುಹಿಸಲಾಗಿದೆ. |
| **ಆ)** | ಹಾಗಿದ್ದಲ್ಲಿ; ಎಷ್ಟು ಸಮಯದೊಳಗೆ ಈ ನಿಟ್ಟಿನಲ್ಲಿ ಸರ್ಕಾರ ಕ್ರಮ ಕೈಗೊಳ್ಳುವುದು? | ಮೇಲಿನ ಉತ್ತರದಿಂದ ನಿರ್ದಿಷ್ಟವಾಗಿ ಈ ನಿಟ್ಟಿನಲ್ಲಿ ಕಾಲಮಿತಿಯನ್ನು ನಿಗದಿಪಡಿಸಲು ಸಾಧ್ಯವಾಗುವುದಿಲ್ಲ. |

**ವೈಎಸ್ ಡಿ/ಇವೈಡಬ್ಲ್ಯೂ/60/2022**

**(ಡಾ|| ನಾರಾಯಣಗೌಡ)**

ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು.